ವಿಜಯ ಕರ್ನಾಟಕ VK

## ಆಡಿಟ್ ವರದಿ ಆಧರಿಸಿ ಕ್ರಮ'

30ರಷ್ಟು ಸಿಸೇರಿಯನ್ ಹೆರಿಗೆಗಳಾಗುತ್ತಿದ್ದು, ಈ ಸಂಬಂಧ ಆಡಿಟ್ ರದಿ ಆಧರಿಸಿ ಅಧಿಕ ಸಿಸೇರಿಯನ್ ಹೆರಿಗೆ ಮಾಡಿರುವ ಆಸ್ಪತ್ರೆಗಳ ವಿರುದ್ಧ ಕ್ರಮ ಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ದರಾಜು ಪ್ರಶ್ನೆಗೆ ಸಚಿವರ ಈ ಉತ್ತರ ನೀಡಿದರು.

ಬೆಳಗಾವಿ
ವಿಧಾನಮಂಡಲ
**ಅಧಿವೇಶನ**

## 'ಕನ್ನಡ ಶಾಲೆ ಮುಚ್ಚುವುದಿಲ್ಲ'



ಯಾವುದೇ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವುದಿಲ್ಲ, ಒಂದೇ ಮಗು, ಶಿಕ್ಷಕರಿದ್ದರೂ ಆ ಶಾಲೆಗೆ ಬಾಗಿಲು ಹಾಕುವುದಿಲ್ಲ, ಮಧ್ಯಾಹ್ನದ ಬಿಸಿಯೂಟವನ್ನೂ ನಿಲ್ಲಿಸುವುದಿಲ್ಲ ಎಂದು ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು. ಕಾಂಗ್ರೆಸ್‌ನ ಉಮಾಶ್ರೀ, ಬಿಜೆಪಿಯ ಚಿದಾನಂದ ಎಂ.ಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ''46 ಸಾವಿರ ಸರಕಾರಿ ಶಾಲೆಗಳಿವೆ. ಅಗತ್ಯವಿದ್ದರೆ ಇನ್ನೂ ಹೆಚ್ಚಿನ ಶಾಲೆಗಳನ್ನು ತೆರೆಯುತ್ತೇವೆ. ಆದರೆ, ಶಾಲೆಗಳನ್ನು ಮುಚ್ಚುವುದಿಲ್ಲ,'' ಎಂದರು.

# ಸಮಯ ಸದ್ಬಳಕೆಯೊಂದಿಗೆ ಅಭಿವೃದ್ಧಿ ಚರ್ಚೆ

## ಉತ್ತರದ ಬಗ್ಗೆ ನಿತ್ಯ 5-6 ಗಂಟೆ ಕಾಲ ವಿಸ್ತೃತ ಚರ್ಚೆ | ರಚನಾತ್ಮಕವಾಗಿ ಮಾತನಾಡುವುದು ಸದಸ್ಯರ ಹೊಣೆ


**ವಿಕ ಸುದ್ದಿಲೋಕ** ಬೆಳಗಾವಿ

ಪ್ರಸಕ್ತ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ವಿಚಾರಗಳ ಚರ್ಚೆಗೆ ವಿಶೇಷ ಆದ್ಯತೆ ನೀಡುವ ಜತೆಗೆ ಸಮಗ್ರ ಕರ್ನಾಟಕ ಕೇಂದ್ರಿತ ವಿಷಯಗಳಿಗೂ ಒತ್ತು ನೀಡಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

**ಉತ್ತರಕ್ಕಾಗಿ ದನಿ**

ಕಿತ್ತೂರು, ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಆದ್ಯತೆ ಕುರಿತ ವಿಕ ವರದಿಗೆ ಪ್ರತಿಕ್ರಿಯೆ ನೀಡಿದ ಸಭಾಧ್ಯಕ್ಷ ಖಾದರ್, ''ಮಂಗಳವಾರದಿಂದ ಬೆಳಗ್ಗೆ ಪ್ರಶ್ನೋತ್ತರ ಕಲಾಪ ಮುಗಿಯುತ್ತಿದ್ದಂತೆ ಉತ್ತರ ಕರ್ನಾಟಕದ ಚರ್ಚೆಗೆ ಅವಕಾಶ ನೀಡಲಾಗುವುದು. ಹಾಗಾಗಿ ನಿತ್ಯ 5-6 ಗಂಟೆ ಕಾಲ ವಿಸ್ತೃತ ಚರ್ಚೆ ನಡೆಯಲಿದ್ದು, ನಂತರದ ಅವಧಿಯಲ್ಲಿ ಉಳಿದ ಕಲಾಪ ನಡೆಸಲಾಗುವುದು. ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ ರಚನಾತ್ಮಕ ಸಲಹೆ, ಮಾಹಿತಿಯುಕ್ತ ಚರ್ಚೆ ನಡೆಯಬೇಕು. ಅದಕ್ಕೆ ಸಮಯ ಕೊಡಲು ಸಿದ್ಧನಿದ್ದೇನೆ. ಸದಸ್ಯರು ಅದರ ಸದುಪಯೋಗಪಡೆದುಕೊಳ್ಳಬೇಕಿದೆ,'' ಎಂದರು.

''ಮೊದಲಿಗೆ ಹಿರಿಯ ಸದಸ್ಯರು, ಉತ್ತರ ಕರ್ನಾಟಕ ಭಾಗದವರಿಗೆ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಲಾಗುವುದು. ಒಬ್ಬರು ಪ್ರಸ್ತಾಪಿಸಿದ ವಿಚಾರವನ್ನು ಮತ್ತೊಬ್ಬರು ಪ್ರಸ್ತಾಪಿಸದೆ ಹೊಸ, ಪ್ರಮುಖ, ಗಂಭೀರ ವಿಚಾರಗಳನ್ನು ಪ್ರಸ್ತಾಪಿಸಿದರೆ ಚರ್ಚೆ ಉಪಯುಕ್ತವೆನಿಸಲಿದೆ. ಮೂಲ ವಿಚಾರವನ್ನೇ ಬಿಟ್ಟು ಬೇರೆ ವಿಚಾರದ ಬಗ್ಗೆ ಚರ್ಚೆ ಮುಂದುವರಿಸುತ್ತಾ ಹೋದರೆ ಸದನದ ಅಮೂಲ್ಯ ಸಮಯ ಪೋಲಾಗುವ ಜತೆಗೆ, ಉತ್ತರ ಕರ್ನಾಟಕ ಭಾಗದ ಜನರಿಗೂ ಯಾವುದೇ ಪ್ರಯೋಜನವಾಗದು ಎಂಬುದನ್ನು ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಈ ಬಗ್ಗೆ ಸದನದಲ್ಲೂ ಪ್ರಸ್ತಾಪಿಸಲಾಗುವುದು,'' ಎಂದು ತಿಳಿದರು.



ಹಿಂದೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಸ್ಪೀಕರ್ ಪೀಠದಿಂದ ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ ಏನಾದರೂ ರೂಲಿಂಗ್ ನೀಡಿದ್ದರೆ ಅದರ ಅನುಪಾಲನಾ ಸ್ಥಿತಿಗತಿ ಬಗ್ಗೆಯೂ ಪರಿಶೀಲಿಸಲಾಗುವುದು. ಒಟ್ಟಾರೆ, ಕಲಾಪದಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳು, ಜನರ ನಿರೀಕ್ಷೆಗಳು ಹಾಗೂ ಆದ್ಯತೆ ಮೇರೆಗೆ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಕುರಿತಂತೆ ಆರೋಗ್ಯಕರ, ರಚನಾತ್ಮಕ ಚರ್ಚೆಗೆ ಸಾಧ್ಯವಿರುವ ಎಲ್ಲ ಅವಕಾಶ ಕಲ್ಪಿಸಲಾಗುವುದು.

**-ಯು.ಟಿ.ಖಾದರ್** ವಿಧಾನ ಸಭಾಧ್ಯಕ್ಷ



ಸದಸ್ಯರು ಸದನದಲ್ಲಿ ನೀಡಲಾಗುವ ಸಮಯವನ್ನು ಸದ್ಬಳಕೆ ಮಾಡಿಕೊಂಡು ಈ ಭಾಗದ ಜನರ ನಿರೀಕ್ಷೆಗಳು, ಆಗಬೇಕಿರುವ ಅಭಿವೃದ್ಧಿ ಕಾರ್ಯಗಳನ್ನು ಯೋಜಿತವಾಗಿ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಿ ಚರ್ಚಿಸಿದರೆ ಉಪಯುಕ್ತವಾಗಲಿದೆ. ಈ ಕುರಿತಂತೆ ಸದಸ್ಯರಿಗೂ ಸಲಹೆ ನೀಡಲಾಗುವುದು.

**-ಬಸವರಾಜ ಹೊರಟ್ಟಿ** ವಿಧಾನ ಪರಿಷತ್ ಸಭಾಪತಿ

**ಸಮಯ ಸದ್ಬಳಕೆಗೆ ಸಲಹೆ:** ''ಉತ್ತರ ಕರ್ನಾಟಕ ಕುರಿತಂತೆ ವಿಧಾನ ಪರಿಷತ್ ಕಲಾಪದಲ್ಲೂ ಚರ್ಚೆಗೆ ಹೆಚ್ಚಿನ ಸಮಯಾವಕಾಶ ನೀಡಲಾಗುವುದು. ಬುಧವಾರ (ಡಿ.10) ಬೆಳಗ್ಗೆ ಪ್ರಶ್ನೋತ್ತರ ಕಲಾಪ ಮುಗಿದ ಬಳಿಕ ನಂತರ ಇಡೀ ದಿನ ಉತ್ತರ ಕರ್ನಾಟಕದ ಚರ್ಚೆಗೆ ಕಲಾಪ ಸೀಮಿತವಾಗಿರಲಿದೆ. ಅದೇ ರೀತಿ ಡಿ.17ರಂದು ಬುಧವಾರವೂ ಪ್ರಶ್ನೋತ್ತರ ಕಲಾಪದ ಬಳಿಕ ಬಾಕಿ ಕಲಾಪವನ್ನು ಉತ್ತರ ಕರ್ನಾಟಕದ ವಿಚಾರದ ಚರ್ಚೆಗೆ ಮೀಸಲಿಡಲಾಗುವುದು,'' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

''ಉಳಿದಂತೆ ಪ್ರಶ್ನೋತ್ತರ, ಶೂನ್ಯವೇಳೆ, ಗಮನ ಸೆಳೆಯುವ ಸೂಚನೆ ಸೇರಿದಂತೆ ಇತರೆ ಕಲಾಪದಲ್ಲೂ ಉತ್ತರ ಕರ್ನಾಟಕ ಸಂಬಂಧಿತ ವಿಚಾರಗಳು ಪ್ರಸ್ತಾಪವಾಗುವುದರಿಂದ ಆ ಸಂದರ್ಭದಲ್ಲೂ ಚರ್ಚೆಗೆ ಅವಕಾಶ ಸಿಗಲಿದೆ. ಆ ಮೂಲಕ ಪರಿಷತ್‌ನಲ್ಲಿ ಕಿತ್ತೂರು, ಕಲ್ಯಾಣ ಕರ್ನಾಟಕವನ್ನೂ ಒಳಗೊಂಡ ಉತ್ತರ ಕರ್ನಾಟಕ ಸಂಬಂಧಿತ ವಿಚಾರಗಳ ಬಗ್ಗೆ ಚರ್ಚೆಗೆ ಹೆಚ್ಚಿನ ಅವಕಾಶ ಸಿಗಲಿದೆ,'' ಎಂದರು.


**ನಮ್ಮ ಹೋರಾಟಕ್ಕೆ ಆರಂಭಿಕ ಯಶಸ್ಸು:** ಉತ್ತರ ಕರ್ನಾಟಕ ಕುರಿತ ಚರ್ಚೆಗೆ ಅಧಿವೇಶನದ ಆರಂಭದಲ್ಲೇ ಅವಕಾಶ ನೀಡಬೇಕೆಂಬ ನಮ್ಮ ಹೋರಾಟಕ್ಕೆ ಸರಕಾರ ಮಣಿದಿದ್ದು, ಮಂಗಳವಾರದಿಂದಲೇ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ನಡೆಸಲಾಗುವುದು. ಉತ್ತರ ಕರ್ನಾಟಕ ಭಾಗದ ಹಲವು ನಾಯಕರು, ಶಾಸಕರು, ಪ್ರಮುಖರೊಂದಿಗೆ ಹಲವು ದಿನಗಳಿಂದ ಸಮಾಲೋಚಿಸಿದ್ದು, ಗಂಭೀರ ಸಮಸ್ಯೆ, ಸವಾಲು, ಮೂಲಸೌಕರ್ಯ ಕೊರತೆ, ಅಭಿವೃದ್ಧಿಯಲ್ಲಿನ ಕುಂಠಿತ ಇತರೆ ವಿಚಾರಗಳನ್ನು ಅಂಕಿಸಂಖ್ಯೆಸಹಿತ, ವಾಸ್ತವಾಂಶದೊಂದಿಗೆ ಪ್ರಸ್ತಾಪಿಸಲಾಗುವುದು. ಹಾಗೆಯೇ ಉತ್ತರ ಕರ್ನಾಟಕದ ಹಲವು ಶಾಸಕರು ಗಂಭೀರ ವಿಚಾರಗಳನ್ನು ಪ್ರಸ್ತಾಪಿಸುವ ನಿಟ್ಟಿನಲ್ಲಿ ವಾರದಿಂದಲೇ ಸಮಾಲೋಚನೆ ನಡೆಸಿ ಸಿದ್ಧಪಡಿಸಲಾಗಿದೆ. ನೆರೆ ಪರಿಹಾರ, ಬೆಳೆ ನಷ್ಟ ಪರಿಹಾರ ವಿತರಣೆಯಾಗದಿರುವುದು, ಶಿಕ್ಷಣ, ಉದ್ಯೋಗ ಸೃಷ್ಟಿಯಲ್ಲಿ ಹಿಂದುಳಿದಿರುವಿಕೆ, ಹೂಡಿಕೆ, ಹೊಸ ಕೈಗಾರಿಕೆಗಳ ಸ್ಥಾಪನೆಯಲ್ಲಿ ಹಿನ್ನಡೆ, ನೀರಾವರಿ ಸೇರಿದಂತೆ ಆದ್ಯತಾ ವಿಷಯಗಳನ್ನು ಪುನರಾವರ್ತನೆಯಾಗದಂತೆ ಪ್ರಸ್ತಾಪಿಸಿ ಪರಿಹಾರ ನೀಡುವಂತೆ ಸರಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಲಾಗುವುದು.

ಪ್ರಜಾವಾಣಿ

# ಭ್ರಷ್ಟಾಚಾರ ಸಾಬೀತು ಮಾಡಿದರೆ ರಾಜೀನಾಮೆ: ಹೊರಟ್ಟಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘ನೇಮಕಾತಿ ಸೇರಿದಂತೆ ಯಾವುದೇ ವಿಷಯದಲ್ಲಿ ಅವ್ಯವಹಾರ ನಡೆದಿರುವುದನ್ನು ಸಾಬೀತು ಮಾಡಿದರೆ ಒಂದು ಕ್ಷಣವೂ ಸ್ಥಾನದಲ್ಲಿ ಮುಂದುವರಿಯುವುದಿಲ್ಲ’ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ಬಸವರಾಜ ಹೊರಟ್ಟಿ

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಕೆಲವರು ಸುಮ್ಮನೆ ಆರೋಪಗಳನ್ನು ಮಾಡುತ್ತಾರೆ. ಸಾಕ್ಷ್ಯಾಧಾರ ಇಟ್ಟುಕೊಂಡು ಮಾತನಾಡಬೇಕು. ಎಂಟು ಬಾರಿ ಪರಿಷತ್ ಸದಸ್ಯನಾಗಿ ಆಯ್ಕೆಯಾಗಿದ್ದೇನೆ. ಸಭಾಪತಿಯಾದ ನಂತರವೂ ಪಾರದರ್ಶಕವಾಗಿ ಇದ್ದೇನೆ. ಸಭಾಪತಿ ಕಚೇರಿಯಲ್ಲಿ ಭ್ರಷ್ಟಾಚಾರದ ದೂರುಗಳಿಗೆ ತಕ್ಷಣ ಸ್ಪಂದಿಸಿದ್ದೇನೆ. ಆರೋಪ ಮೇಲ್ನೋಟಕ್ಕೆ ಸಾಬೀತಾದ ಪ್ರಕರಣಗಳಲ್ಲಿ ಮೂವರ ವಿರುದ್ಧ ಕ್ರಮ ಜರುಗಿಸಲಾಗಿದೆ. ನನ್ನ ಮೇಲಿನ ಆರೋಪವನ್ನು ನಿಯಮದಂತೆ ಮಂಡಿಸಿದರೆ ನಿಯಮದಂತೆ ಕ್ರಮವಹಿಸಲಾಗುವುದು. ತಪ್ಪು ಕಂಡುಬಂದರೆ ರಾಜೀನಾಮೆ ನೀಡುವೆ. ಇಲ್ಲದಿದ್ದರೆ ಸಭಾಪತಿ ಪೀಠದ ಗೌರವಕ್ಕಾಗಿಯಾದರೂ ಆರೋಪ ಮಾಡಿದವರ ವಿರುದ್ಧ ಕ್ರಮಕೈಗೊಳ್ಳಲಾಗುವುದು’ ಎಂದರು.

ಡಿ.10ರಂದು ಪ್ರಶ್ನೋತ್ತರ ಅವಧಿ ಮುಗಿದ ನಂತರ ಇಡೀ ದಿನದ ಕಲಾಪವನ್ನು ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಚರ್ಚೆಗೆ ಮೀಸಲಿಡಲಾಗುವುದು. ಕಲಾಪದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ ಯೋಜನೆಗಳ ಅನುಷ್ಠಾನ, ಅರಣ್ಯಭೂಮಿ ಅತಿಕ್ರಮಣ, ಸಂತ್ರಸ್ತರ ಸಮಸ್ಯೆ ಹಾಗೂ ಪರಿಹಾರೋಪಾಯಗಳು, ರೈತರು ಎದುರಿಸುತ್ತಿರುವ ಸಮಸ್ಯೆ, ಉದ್ಯೋಗ ಸೃಷ್ಟಿ ಸೇರಿದಂತೆ ವಿವಿಧ ವಿಷಯಗಳ ಮೇಲೆ ಚರ್ಚೆಗೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

ಈ ಅಧಿವೇಶನಕ್ಕೆ ಒಟ್ಟು 1,649 ಪ್ರಶ್ನೆಗಳನ್ನು ಸ್ವೀಕರಿಸಲಾಗಿದೆ. ನಿಯಮ 72ರಡಿ 112 ಸೂಚನೆ, ನಿಯಮ 330ರಡಿ ಬಂದಂತಹ 84 ಸೂಚನೆಗಳನ್ನು ಸ್ವೀಕರಿಸಲಾಗಿದೆ. ಕಲಾಪ ಸಲಹಾ ಸಮಿತಿ ತೀರ್ಮಾನದಂತೆ ಇತರೆ ವಿಷಯಗಳ ಮೇಲೆ ಚರ್ಚೆ ನಡೆಯಲಿದೆ ಎಂದು ಹೇಳಿದರು.

## ನೇಮಕಾತಿ ಅಕ್ರಮಕ್ಕೆ ದಾಖಲೆಗಳಿವೆ: ಯಾದವ್

‘ವಿಧಾನಪರಿಷತ್ ಕಾರ್ಯಾಲಯದಲ್ಲಿ ನಡೆದ ನೇಮಕಾತಿಯಲ್ಲಿ ಅವ್ಯವಹಾರ ನಡೆದಿರುವುದಕ್ಕೆ ದಾಖಲೆಗಳಿವೆ. ಎಲ್ಲ ದಾಖಲೆಗಳನ್ನೂ ಸದನದ ಮುಂದೆ ಇಡುತ್ತೇನೆ’ ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ನಾಗರಾಜ್ ಯಾದವ್ ಪುನರುಚ್ಚರಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಭಾಪತಿ ಕಾರ್ಯಾಲಯವೇ ಅವ್ಯವಹಾರದಲ್ಲಿ ಭಾಗಿಯಾಗಿದೆ. ಪರೀಕ್ಷೆಯ ನಂತರ ತಮಗೆ ಬೇಕಾದಂತೆ ಪಟ್ಟಿ ಸಿದ್ಧಪಡಿಸಿಕೊಂಡಿದ್ದಾರೆ. ಶೀಘ್ರ ದಾಖಲೆ ಬಿಡುಗಡೆ ಮಾಡಲಾಗುವುದು. ಪಕ್ಷ ಅನುಮತಿ ನೀಡಿದರೆ ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲಾಗುವುದು’ ಎಂದರು.

[redacted]

ಪ್ರಜಾವಾಣಿ

# ಸಭಾಪತಿ ವಿರುದ್ಧ ಆಕ್ರೋಶ: ಕ್ಷಮೆಯಾಚನೆ

ಬೆಳಗಾವಿ: ಕಾಂಗ್ರೆಸ್‌ನ ನಾಗರಾಜ್ ಯಾದವ್ ಅವರು ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಸದನದಲ್ಲೇ ಆಕ್ರೋಶ ವ್ಯಕ್ತಪಡಿಸಿ, ನಂತರ ಕ್ಷಮೆಯಾಚಿಸಿದ ಪ್ರಸಂಗಕ್ಕೆ ಸೋಮವಾರ ನಡೆದ ವಿಧಾನಪರಿಷತ್ ಕಲಾಪ ಸಾಕ್ಷಿಯಾಯಿತು.

ಪ್ರಶ್ನೋತ್ತರ ಅವಧಿ ನಿಗದಿಗಿಂತ ಹೆಚ್ಚು ಸಮಯ ತೆಗೆದುಕೊಂಡದ್ದನ್ನು ಉಲ್ಲೇಖಿಸಿದ ಬಸವರಾಜ ಹೊರಟ್ಟಿ ಅವರು, ‘ಪ್ರತಿ ದಿನ ಪ್ರಶ್ನೋತ್ತರಕ್ಕೆ 75 ನಿಮಿಷ ನಿಗದಿ ಮಾಡಲಾಗಿದೆ. ಪ್ರತಿ ಸದಸ್ಯರು 10ರಿಂದ 20 ನಿಮಿಷ ತೆಗೆದುಕೊಂಡರೆ ಮಧ್ಯಾಹ್ನದವರೆಗೆ ಇದೇ ಆಗುತ್ತದೆ. 75 ನಿಮಿಷಕ್ಕೆ ಮುಗಿಸಿದರೆ ಉಳಿದ ಸದಸ್ಯರ ಪ್ರಶ್ನೆಗಳು ವ್ಯರ್ಥವಾಗುತ್ತವೆ. ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೂ ಸಮಯ ಸಿಗುವುದಿಲ್ಲ’ ಎಂದರು.

ಪ್ರಶ್ನೋತ್ತರಕ್ಕೆ ಹೆಚ್ಚು ಸಮಯ ತೆಗೆದುಕೊಂಡ ಸದಸ್ಯರ ಹೆಸರು ಹೇಳುವಾಗ ನಾಗರಾಜ್ ಯಾದವ್ ಅವರನ್ನೂ ಸಭಾಪತಿ ಹೆಸರಿಸಿದರು. ಆಗ ಆಕ್ರೋಶಗೊಂಡ ಯಾದವ್, ‘ನನಗೂ ನಿಯಮಗಳ ಬಗ್ಗೆ ಗೊತ್ತಿದೆ. ನಾನೂ ಓದಿಕೊಂಡಿದ್ದೇನೆ’ ಎಂದು ಸಭಾಪತಿಗಳಿಗೆ ಏರಿದ ಧ್ವನಿಯಲ್ಲಿ ಉತ್ತರಿಸಿದರು. ಅವರ ಮಾತನ್ನು ಎಲ್ಲ ಸದಸ್ಯರೂ ಪಕ್ಷಭೇದ ಮರೆತು ಖಂಡಿಸಿದರು. ನಂತರ ಯಾದವ್ ಕ್ಷಮೆಯಾಚಿಸಿದರು.

[redacted]

# ಭ್ರಷ್ಟಾಚಾರಕ್ಕೆ ಸಾಕ್ಷ್ಯ ಕೊಟ್ಟರೆ ರಾಜೀನಾಮೆ: ಹೊರಟ್ಟಿ

ವಿಧಾನ ಪರಿಷತ್ ಸಚಿವಾಲಯದ ನೇರ ನೇಮಕದಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ಸಾಕ್ಷ್ಯ ಕೊಟ್ಟರೆ ಒಂದು ನಿಮಿಷವೂ ಸಭಾಪತಿ ಸ್ಥಾನದಲ್ಲಿ ಕುಳಿತುಕೊಳ್ಳುವುದಿಲ್ಲ. ತಕ್ಷಣವೇ ರಾಜೀನಾಮೆ ಕೊಟ್ಟು ಹೊರನಡೆಯುತ್ತೇನೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುವರ್ಣಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಷತ್ ಸದಸ್ಯ ನಾಗರಾಜ್ ಯಾದವ್ ಆರೋಪಕ್ಕೆ ಪ್ರತ್ಯುತ್ತರ ರೀತಿಯಲ್ಲಿ ಸ್ಪಷ್ಟೀಕರಣ ನೀಡಿದರು. ''45 ವರ್ಷಗಳ ಶಾಸನಸಭೆಯ ಅವಧಿಯಲ್ಲಿ ಭ್ರಷ್ಟಾಚಾರ ಪೋಷಿಸಿದವ ನಾನಲ್ಲ,'' ಎಂದರು.

''ಕೆಇಎನಿಂದ ಲಿಖಿತ ಪರೀಕ್ಷೆ ನಡೆಸಿ 32 ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಕೆಇಎ ನೀಡಿದ ಫಲಿತಾಂಶ ಆಧರಿಸಿ ಅಭ್ಯರ್ಥಿಗಳ ಆಯ್ಕೆಪಟ್ಟಿ ಪ್ರಕಟಿಸಲಾಗಿದೆ. ನಾವು ಮಧ್ಯಪ್ರವೇಶ ಮಾಡಿಲ್ಲ. ಸಾಕ್ಷಿ ಇದ್ದರೆ ಕೊಡಲಿ. ಸಭಾಪತಿಯಂತಹ ಸಂವಿಧಾನಿಕ ಹುದ್ದೆಯಲ್ಲಿ ಇದ್ದವರ ಬಗ್ಗೆ ಮಾತನಾಡುವಾಗ ನಿಯಮಾವಳಿ ತಿಳಿದುಕೊಂಡು ಮಾತನಾಡಬೇಕು. ಸುಳ್ಳು ಆರೋಪಗಳಿಗೆ ಬೆದರದೆ ನಾನು ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳುತ್ತೇನೆ,'' ಎಂದು ಹೇಳಿದರು.